ಗೆದ್ದಳು. ಕಾಯಕನಾಥ ಮೇಲೆ ಬಂದು ಹಾಗೇ ಮಂಡಿಯೂರಿ ಕುಳಿತು ಬಿಕ್ಕಳಿಸಿದ. ಅವನ ಅಳು ಕ್ರಮೇಣ ತಾರಕಕ್ಕೇರಿ, ಎದೆಯ ಕುದಿ, ನೋವು ಕಂಬನಿಯಾಗಿ ಹರಿದು ಕುಮುದಿನಿಯಲ್ಲಿ ಕರಗಿ ಹೋದರೆ, ಅವನ ಅಳುವಿನ ಧ್ವನಿ ಆ ಅಜ್ಜರಕಾಡಿನ ಮರಗಿಡಗಳ ನಡುವೆ ಅಡಗಿ ಹೋಗಿತ್ತು.

ಅಧ್ಯಾಯ 5

ಎಷ್ಟು ಹೊತ್ತು ಹಾಗೇ ನೀರವವಾಗಿ ಕಂಬನಿ ಮಿಡಿದು ಕುಳಿತಿದ್ದನೋ, ಅವನ ಹೃದಯ ತನಗೆ ತಾನೇ ಸಂತೈಸಿಕೊಂಡಂತಿತ್ತು. ಹೊರೆಯಾಗಿ ಕುಳಿತಿದ್ದ ದುಗುಡ ಈಗ ಕರಗಿ ಕುಮುದಿನಿಯಾಗಿ ಹರಿದುಹೋಗಿತ್ತು. ಕಡೆಗೆ ಎದ್ದು ನಿಧಾನವಾಗಿ ಕಾಲೆಳೆದುಕೊಂಡು ಜಂಪಯ್ಯ ಮಲಗಿದ್ದಲ್ಲಿಗೆ ಬಂದ. ಅವನ ಮುಖ ಕಂಡು ಜಂಪಯ್ಯನಿಗೆ ಸಮಾಧಾನವಾದರೂ, ತನ್ನ ಅಸಮಾಧಾನವನ್ನು ಮೊದಲು ಕಾರಿಕೊಂಡ.

'ಮೈಮೇಲೆ ಗಣ ಬಂದವನಂತೆ ಯಾಕೆ ಓಡಿದೆ ಹಾಗೆ? ಸದ್ಯ ಕುಮುದಿನೀಲಿ ನಿನ್ನ ಸೆಳೆದುಕೊಂಡು ಹೋಗುವಷ್ಟು ನೀರಿಲ್ಲದ್ದಕ್ಕೆ ಆಯ್ತು ಎಲ್ಲಿ ಹೋಗಿ ಹಾರಿ ಪ್ರಾಣ ಬಿಡ್ತೀಯೋ ಅಂದುಕೊಂಡೆ. ಹೋಗಲಿ ಬಿಡು... ಬಂದ್ಯಲ್ಲಾ... ನನ್ನ ಬೆನ್ನಿಗೆ ಸ್ವಲ್ಪ ಈ ಮದ್ದು ತಿಕ್ಕಿ ಬಿಡು...' ಜಂಪಯ್ಯ ಕಾಯಕನಾಥನ ಬಳಿ ಮಾಡಿಸಿದ ಬೇರಿನ ರಸ ತೋರಿಸಿದ. ಕಾಯಕನಾಥ ಮಾತನಾಡದೇ ಅವನ ಸೇವೆಗೆ ನಿಂತ. ಅವನ ಆದೇಶದಂತೆ ನಡೆದುಕೊಂಡ. ಜಂಪಯ್ಯ ಮಗುಚಿ ಮಲಗಿದ್ದವನು ನೋವಿನಲ್ಲಿ ಮುಲುಗಿದ.

'ನನ್ನ ಜೀವನಪೂರ್ತಿ ಬೇರೆಯವರ ಸೇವೆ ಮಾಡಿಕೊಂಡು ಬಂದೆ... ಈಗ ನನಗೇ ಇಂಥ ಸ್ಥಿತಿ ಬಂತು ನೋಡು'

ಕಾಯಕನಾಥ ಅದಕ್ಕೂ ಮಾತನಾಡಲಿಲ್ಲ. ಯೋಗೀಶರು ಕೊಟ್ಟು ಹೋಗಿದ್ದ ಚಪಾತಿ ಇತ್ತು. ಹಸಿವಾದಾಗ ತಿಂದು ಮುಗಿಸಿದರು. ಜಂಪಯ್ಯ ಮಾತನಾಡುತ್ತಲೇ ಇದ್ದರೆ, ಕಾಯಕನಾಥ ಮೌನದೊಂದಿಗೆ ಸ್ಪರ್ಧೆಗೆ ಇಳಿದಂತಿತ್ತು.

* * *

ಜಂಪಯ್ಯ ಎದ್ದು ಕೂರುವಷ್ಟು ಚೇತರಿಸಿಕೊಂಡ. ಯೋಗೀಶರು ನಿಯಮಿತವಾಗಿ ಬರಲು ಸಾಧ್ಯವಾಗದಿದ್ದರೂ, ಇವರಿಬ್ಬರಿಗೆ ಆಹಾರದ ಕೊರತೆಯನ್ನು ನೀಗಿಸುವಷ್ಟು ವ್ಯವಸ್ಥೆ ಮಾಡಿದ್ದರು. ಜಂಪಯ್ಯ ಎಷ್ಟೇ ಆಗ್ರಹಿಸಿದರೂ ಕಾಯಕನಾಥ ಕಾರಗದ್ದೆಗೆ ಬರಲು ಸಿದ್ಧನಿರಲಿಲ್ಲ. ಅವನಿಗೆ ಅಜ್ಜರಕಾಡಿನ ಅ ಪರಿಸರ ಹಿತವೆನಿಸಿತ್ತು. ಜಂಪಯ್ಯ ಕೂಡಾ ಆ ಪರಿಸರಕ್ಕೆ ಹೊಂದಿಕೊಂಡಿದ್ದ. ಕ್ರಮೇಣ ಅವನಲ್ಲೂ ಒಂದು ಆಸೆ ಚಿಗುರೊಡೆದಿತ್ತು.

'ಹೇಗೂ ಈ ನನ್ನ ಬೆನ್ನುನೋವು ನನಗೆ ಇನ್ನು ಕೆಲಸ ಮಾಡಲು ಅನುವು ಮಾಡಿಕೊಡುವುದಿಲ್ಲ. ಕಾರಗದ್ದೇಲಿ ನನಗೇ ಅಂತ ಒಂದು ಸ್ವಂತ ಸೂರಿಲ್ಲ. ನಾವು ಇಲ್ಲೇ ಒಂದು ಮನೆ ಮಾಡಿಕೊಂಡು ಇದ್ದು ಬಿಡೋಣವಾ...?'

ಕಾಯಕನಾಥನಿಗೆ ಅವನ ಮಾತು ರುಚಿಸಲಿಲ್ಲ. 'ಇರೋದು ನಾಲ್ಕು ದಿನ... ಅದಕ್ಕೆ ಸೂರು ಯಾಕೆ? ನೋಡು... ಈ ಪ್ರಕೃತೀನೆ ಮನೆ ಮೇಲೆ ದೀಪ ಹಚ್ಚೋ ಸೂರ್ಯ, ಚಂದ್ರ, ಸುತ್ತ ಗೋಡೆ ಆಗಿರೋ ಕಾಡು ಮರಗಳು... ನೀರಿಗಾಗಿ ಕುಮುದಿನಿ... ಮಲಗೋಕೆ, ತಿರುಗಾಡೋಕೆ ಈ ಭೂಮಿ ತಾಯಿ. ಅದರಿಂದ ಯಾಕೆ ನಿನ್ನನ್ನು ನೀನು ಬೇರ್ಪಡಿಸಿಕೊಳ್ತೀಯ? ಇಲ್ಲಿ ಸಿಗೋ ಆನಂದ, ಸುಖ ಗೂಡಿನೊಳಗೆ ಸಿಗಲ್ಲ...'

'ನಿನ್ನ ಮಾತು ಸರಿ ಕಣಪ್ಪಾ ಹುಚ್ಚ ಆದರೆ ನಿನ್ನ ಸೂರ್ಯ ಸುಡ್ತಾನಲ್ವಾ ನಿನ್ನ ಬಾನು ಮಳೆ ಸುರಿಸ್ತಾನಲ್ವ? ನಿನ್ನ ಭೂಮಿ ತೇವಗೊಳ್ತಾಳಲ್ವ? ನಿನ್ನ ನದಿ ಉಕ್ಕಿ ಹರೀತಾಳಲ್ವ? ನಿನ್ನ ಈ ಕಾಡಿನ ಒಳಗಿನಿಂದ ಕಾಡು ಪ್ರಾಣಿಗಳು ಬರ್ತಾವಲ್ವ? ಇದೆಲ್ಲದರಿಂದ ರಕ್ಷಣೆ ಬೇಕಲ್ವಾ? ಅದಕ್ಕೆ ಹೇಳಿದೆ ಬರೀ ಭಾವನಾತ್ಮಕವಾಗಿ ಯೋಚಿಸಿದರೆ ಸಾಲದು ಸ್ವಲ್ಪ ವಿಚಾರವಂತಿಕೆ ಬೇಕು' ಜಂಪಯ್ಯ ಮೂದಲಿಸುವಂತೆ ಜರಿದ. ಜಂಪಯ್ಯ ಆಗಲೇ ತನ್ನ ನಿರ್ಧಾರ ಗಟ್ಟಿ ಮಾಡಿಕೊಂಡಂತಿತ್ತು.

ಈ ಸಲ ಯೋಗೀಶರು ಬೀಟ್ ಮೇಲೆ ಬಂದಾಗ ಜಂಪಯ್ಯ ತನ್ನ ಯೋಜನೆಯನ್ನು ಅವರ ಮುಂದೆ ಹರವಿದ, 'ಯೋಗೀಶಣ್ಣ... ನಾನು ಇನ್ನು ಎಲ್ಲೂ ಅಲೆದಾಡುವುದಿಲ್ಲ. ಇಷ್ಟು ದಿನ ನನ್ನ ಜೀವನ ಬರೀ ಬೇರೆಯವರ ಸೇವೆ ಮಾಡಿಕೊಂಡು ಕಳೆದುಬಿಟ್ಟೆ. ಇನ್ನು ನನ್ನ ಕೈಲಿ ಅದು ಆಗೋದಿಲ್ಲ. ಇನ್ನು ನಾನು ನನ್ನ ನೆಲೆ ಕಾಣ್ಕೋಬೇಕು. ಅಲ್ಲಿ ಕಾರಗದ್ದೇಲಿ ನನಗೆ ನನ್ನದೂ ಅಂತ ಒಂದು ಹಿಡಿ ಜಾಗ ಇಲ್ಲ. ಯಾರ ಮನೇಲಿ ಉಳೀಲಿ? ನೀನು ನನ್ನ ಈ ಕಾಯಕನಾಥನ ನೆಪದಲ್ಲಿ ಇಲ್ಲಿಗೆ ಕರೆಸಿದ್ದು ಒಳ್ಳೇದೇ ಆಯಿತು. ನಾನು ಇನ್ನು ಮುಂದೆ ಇಲ್ಲೇ ಇದ್ದುಬಿಡ್ತೀನಿ.'

ಸಣ್ಣ ಸಣ್ಣ ಮರದ ಒಣಗಿದ ಚೂರುಗಳನ್ನು ಸಣ್ಣ ಗುಡ್ಡೆ ಹಾಕಿ ಅದಕ್ಕೆ ಬೆಂಕಿ ಹಾಕಲಾಗಿತ್ತು. ಮೂವರೂ ಆ ಬೆಂಕಿಯ ಸುತ್ತ ಕುಳಿತಿದ್ದರು. ಅದರ ಬೆಳಕಿನಲ್ಲಿ ಜಂಪಯ್ಯನನ್ನು ದೀರ್ಘವಾಗಿ ನೋಡುತ್ತ ಯೋಗೀಶರು ಗದರಿದರು.

'ಏನು ಜಂಪಯ್ಯ ಇವನನ್ನ ಕಾರಗದ್ದೇಗೆ ಕರ್ಕೊಂಡು ಹೋಗು ಅಂದ್ರೆ ನೀನು ಇಲ್ಲೇ ಇರ್ತೀನಿ ಅಂತಿದ್ಯಲ್ಲಾ? ತಲೆ ಸರಿ ಇದ್ಯಾ ನಿನಗೆ? ಇಲ್ಲಿರ್ತೀನಿ ಅಂದರೆ ಇದು ಯಾರ ಅಪ್ಪನ ಜಾಗ? ಅಜ್ಜರಕಾಡು ಮನೆತನದವರದ್ದು. ಅವರು ನಾಳೆ ಬಂದು ಹಕ್ಕುಸ್ಥಾಪನೆ ಮಾಡಿದರೆ ಏನು ಮಾಡ್ತೀಯಾ?'

'ಇಷ್ಟು ವರ್ಷಗಳೇ ಬಂದಿಲ್ಲವಂತೆ... ಇನ್ನು ಬರ್ತಾರಾ?' ಜಂಪಯ್ಯ ಉಡಾಫೆಯ ಸ್ವರದಲ್ಲಿ ಉತ್ತರಿಸಿದ.

'ಒಂದು ವೇಳೆ ಬಂದರೆ?'

'ಆಗ ನೋಡಿದರಾಯ್ತು ಬಿಡಿ ನೀವು ನನ್ನ ಏನೂ ಅನ್ನೋ ಹಂಗಿಲ್ಲ. ನಾನೇನೂ ಈ ಕಾಯನಂತೆ ನಿಮ್ಮ ಕಾಡಲ್ಲಿ ಬಂದು ಕೂತಿಲ್ಲ. ನನ್ನ ಪ್ರಶ್ನಿಸುವ ಹಕ್ಕಿರುವುದು ಈ ಜಾಗದ ಮಾಲೀಕರಿಗೆ ಮಾತ್ರ. ಅವರು ಬರುವವರೆಗೂ ನನ್ನ ಖುಷಿ ಬಂದ ಹಾಗೆ ನಾನಿರ್ತೀನಿ' ಜಂಪಯ್ಯ ನಿರ್ಧರಿಸಿದಂತೆ ಮಾತನಾಡಿದಾಗ ಯೋಗೀಶರು ಕೂಡ ಎದುರಾಡದವರಂತಾದರು. ಅವನ ಮಾತು ಅವರಿಗೆ ಇಷ್ಟವಾಗಲಿಲ್ಲವೆಂಬಂತೆ ಗಿರೀಶರು ತಮ್ಮ ಟಾರ್ಚ್ ಬೆಳಗಿಸಿ ಎದ್ದು ಹೊರಟುಬಿಟ್ಟರು. ಕತ್ತಲಲ್ಲಿ ಅವರ ಆಕೃತಿ ಕಣ್ಮರೆಯಾದಾಗ ಜಂಪಯ್ಯ ಅವರು ಹೋದ ದಿಕ್ಕಿನತ್ತ ನೋಡುತ್ತ ನುಡಿದ,

'ಇವ್ರಿಗೆ ತಿಂಗಳ ಕೊನೇಗೆ ಸಂಬಳ ಅಂತ ಬರುತ್ತೆ. ನಿಶ್ಚಿತ ಆದಾಯ ಇದ್ದರೆ ಮನೆ ಮಠ ಎಲ್ಲಾ ಯೋಜನೆ ಹಾಕಬಹುದು. ನಮಗೆಲ್ಲಿದೆ ಅಂಥ ವ್ಯವಸ್ಥೆ. ನಮ್ಮ ಗೇಣುದ್ದ ಹೊಟ್ಟೆಗೆ ಯಾರ ಯಾರ ಮನೆಲೋ ಚಾಕರಿ ಮಾಡಿ ಕೊಟ್ಟದ್ದು ತಿಂದು ಬದುಕಬೇಕು. ಹೊಟ್ಟೆ ತುಂಬೋದೇ ಕಷ್ಟ. ಇನ್ನು ಮನೆ ಕನಸು ಹೇಗೆ ಕಾಣೋದು? ಈ ಯೋಗೀಶ ಕಾಲು ಗಾಯ ಮಾಡಿಕೊಂಡು ಆಸ್ಪತ್ರೇಲಿ ಬಿದ್ದಾಗ ಇವರ ಹೆಂಡತಿ ಬಂದು ನೋಡಿಕೊಳ್ಳಲಿಲ್ಲ. ಇವನ ಚಾಕರಿ ಮಾಡಿದ್ದು ನಾನು. ಈಗ ನನ್ಗೆ ಅನ್ನಕ್ಕೆ ಬರ್ತಾನೆ.' ಜಂಪಯ್ಯನ ಮನದಲ್ಲಿ ಮನೆಯ ವಿಷಯ ಗಟ್ಟಿಯಾಗಿ ಕೂತಿತ್ತೆಂದು ಕಾಯಕನಾಥನಿಗೆ ಮನವರಿಕೆಯಾಯಿತು. ಆ ರಾತ್ರಿ ಅದೇ ಗುಂಗಿನಲ್ಲಿ ಜಂಪಯ್ಯ ನಿದ್ರಿಸಲಿಲ್ಲ. ಕಾಯಕನಾಥನಿಗೂ ಮಲಗಲು ಬಿಡಲಿಲ್ಲ. ಮುಂಜಾವಿನಲ್ಲಿ ಕಾಯಕನಾಥನಿಗೆ ಸಣ್ಣ ನಿದ್ದೆ ಹತ್ತಿತ್ತು. ಅವನಿಗೆ ಎಚ್ಚರಿಕೆಯಾದಾಗ ಜಂಪಯ್ಯ ಆಗಲೇ ಎದ್ದು ಹೋಗಿದ್ದ.

ಎಷ್ಟು ಹೊತ್ತಾದರೂ ಅವನ ಸುಳಿವಿರಲಿಲ್ಲ. ಅವನ ಹಾದಿ ಕಾಯುತ್ತಾ ಕುಳಿತ ಕಾಯಕನಾಥನಿಗೆ ಮತ್ತೆ ಜೋಂಪು ಹತ್ತಿತು. ಎಷ್ಟೋ ಹೊತ್ತಿನ ಬಳಿಕ ಬಿಸಿಲು ಮೈ ಸುಟ್ಟಾಗ ಎಚ್ಚರವಾಯಿತು. ಅವನು ಮಲಗಿದ ಸ್ಥಳದಲ್ಲೇ ಎದ್ದು ಕುಳಿತಿದ್ದಾಗ ಕುಮುದಿನಿಯಲ್ಲಿ ಮಿಂದೆದ್ದು ಚಂಡಿಯಾಗಿ ಬಂದ ಜಂಪಯ್ಯ, ತಾನು ಮರದ ಬುಡದಲ್ಲಿ ನೆಟ್ಟ ಕಲ್ಲಿಗೆ ಭಕ್ತಿಯಿಂದ ಕೈಮುಗಿದ. ಇಂದಿನ ಪ್ರಾರ್ಥನೆ ತುಸು ವಿಶೇಷವಾಗಿಯೂ, ಹೆಚ್ಚು ಭಯಭಕ್ತಿಯಿಂದ ಕೂಡಿರುವಂತೆ ಕಾಯಕನಾಥನಿಗೆ ಭಾಸವಾಯಿತು. ಅವನು ವಿವಿಧ ಭಂಗಿಗಳಲ್ಲಿ ಕುಳಿತು ಬೇಡುತ್ತಿದ್ದುದನ್ನು ಕಂಡು ಅವನ ಇಂದಿನ ದೀರ್ಘ ಪ್ರಾರ್ಥನೆಯ ಹಿನ್ನೆಲೆ ಅರಿವಿದ್ದ ಕಾರಣ ಕಾಯಕನಾಥನಿಗೆ ನಗು ಬಂದಿತು.

'ಮನುಷ್ಯ ತನ್ನ ಆಸೆಗಾಗಿ ಎಷ್ಟೆಲ್ಲ ಪ್ರಾರ್ಥಿಸುತ್ತಾನೆ. ಪ್ರಾರ್ಥಿಸಿದ್ದೆಲ್ಲಾ ಭಗವಂತ ಈಡೇರಿಸುತ್ತಿದ್ದರೆ ಬಹುಶಃ ಅವನಿಗೆ ಮಹತ್ವವೇ ಇರುತ್ತಿರಲಿಲ್ಲ. ಅಥವಾ ಮನುಷ್ಯನ ಆಸೆಗೆ ಮಿತಿ ಇರುತ್ತಿರಲಿಲ್ಲವೇನೋ..!'

ಅವನ ಸಮೀಪ ಬಂದ ಜಂಪಯ್ಯ ಒದ್ದೆ ಮೈ ಒರೆಸಿಕೊಂಡು ತನ್ನ ಅಂಗಿ ಪಂಚೆ ಉಟ್ಟ.

'ನೀನೇನು ಮನುಷ್ಯ ಮಾರಾಯ. ನಾನು ಕಾರಗದ್ದೇಗೆ ಹೋಗಿ ಬಂದರೂ ನಿನಗೆ ಎಚ್ಚರಿಕೆ ಇಲ್ಲ. ನಿನ್ನ ಹೊತ್ತುಕೊಂಡು ಹೋದರೂ ಗೊತ್ತಾಗಲ್ಲ. ಸುಖೀ ಮನುಷ್ಯ ಅಂದರೆ ನೀನೇ ನೋಡಪ್ಪಾ. ಯಾವ ಆಸೆ, ಆಮಿಷಗಳಿಲ್ಲದ ಸ್ಮಶಾನ ವೈರಾಗ್ಯ ಹೊತ್ತ ಮನುಷ್ಯ.' ಅದಕ್ಕೂ ಕಾಯಕನಾಥ ಸ್ಪಂದಿಸಲಿಲ್ಲ.

'ನೋಡು... ಕಾರಗದ್ದೇಗೆ ಹೋಗಿ ಏನು ತಂದಿದೀನಿ ಅಂತ?' ಅವನ ಕೈಯಲ್ಲಿ ಕತ್ತಿ, ಸಣ್ಣ ಕೊಡಲಿ, ಸಲಿಕೆ, ಪಿಕ್ಕಾಸು ಇತ್ತು. ಅವನು ಸಕಲ ಸಿದ್ಧತೆ ಮಾಡಿಕೊಂಡು ಬಂದಿದ್ದ.

'ಇದನ್ನೆಲ್ಲಾ ಅಷ್ಟು ದೂರದಿಂದ ಹೇಗೆ ಹೊತ್ತುಕೊಂಡು ಬಂದೆ? ಖರೀದಿ ಮಾಡಿದ್ಯಾ?'